ಮತ್ತು ಡಾಂಬರೀಕರಣ) ಹಾಗೂ ಕಿಮೀ 3.00 ದಿಂದ ಕಿ.ಮೀ 5.00 ಮತ್ತು ಕಿಮೀ. 7.00 ದಿಂದ 11.00 ಕಿಮೀ ವರೆಗೆ ಕಳೆದ 2 ವರ್ಷದ ಅವಧಿಯಲ್ಲಿ ನವೀಕರಣಗೊಂಡಿರುವುದರಿಂದ ವಾಹನ ಸಂಚಾರಕ್ಕೆ ಅನುಕೂಲವಾಗಿರುತ್ತದೆ. ಉಳಿದ ಭಾಗಗಳಲ್ಲಿ ತುರ್ತಾಗಿ ಗುಂಡಿಗಳನ್ನು ಮುಚ್ಚುವ ಕೆಲಸದಿಂದ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಅನುದಾನದ ಲಭ್ಯತೆಯ ಮೇರೆಗೆ ದುರಸ್ತಿಗಳನ್ನು ಕೈಗೊಳ್ಳಲಾಗುತ್ತದೆ.

....

113 (158): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಬ್ರಹ್ಮಣ್ಯ ಧರ್ಮಸ್ಥಳ-ಬೆಳ್ತಂಗಡಿ- ಕಾರ್ಕಳ-ಉಡುಪಿ ರಸ್ತೆಯು ರಾಜ್ಯ ಹೆದ್ದಾರಿಯಾಗಿದ್ದು, ಇಟ್ಲಂಪಾಡಿ ಎಂಬಲ್ಲಿ ಸೇತುವೆಯಾಗದೆ ಇರುವುದರಿಂದ ಸದರಿ ರಸ್ತೆಯು ಸರ್ವಋತು ರಸ್ತೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆ ನಿರ್ಮಾಣ ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ನಿರ್ಮಾಣ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಹೌದು.

ಆ) ಇದೆ.

ಇ) ಸರ್ಕಾರದಿಂದ ಅವಶ್ಯಕವಾದ ಆರ್ಥಿಕ ನೆರವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ದೊರೆತಲ್ಲಿ ಈ ಸೇತುವೆ ನಿರ್ಮಾಣ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

....

114 (159): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಬ್ರಹ್ಮಣ್ಯ-ಧರ್ಮಸ್ಥಳ-ಬೆಳ್ತಂಗಡಿ-ಉಡುಪಿ ರಾಜ್ಯ ರಸ್ತೆಯಲ್ಲಿ ಪುತ್ತೂರು ತಾಲ್ಲೂಕಿನ ಮರ್ದಾಳದಿಂದ ಪೇರಡ್ಕದವರೆಗೆ ಡಾಂಬರೀಕರಣವಾಗದೆ ವಾಹನ ಸಂಚಾರ ಮತ್ತು ಜನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸದರಿ ರಸ್ತೆಗಳ ಡಾಂಬರೀಕರಣಕ್ಕೆ ಕ್ರಮವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಹೌದು

ಆ) ಸುಬ್ರಹ್ಮಣ್ಯ-ಧರ್ಮಸ್ಥಳ-ಬೆಳ್ತಂಗಡಿ-ಉಡುಪಿ ರಾಜ್ಯ ರಸ್ತೆಯಲ್ಲಿ ಪುತ್ತೂರು ತಾಲ್ಲೂಕಿನ ಮರ್ದಾಳದಿಂದ ಪೇರಡ್ಕ ರಸ್ತೆ ಭಾಗವು ಕಿಮೀ 17.60 ರಿಂದ ಪ್ರಾರಂಭವಾಗಿ 23.20 ವರೆಗೆ ಇರುತ್ತದೆ. 2003-04ನೇ ಸಾಲಿಗೆ ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ರೂ. 60.00 ಲಕ್ಷಗಳಿಗೆ ಕಾಮಗಾರಿ ಮಂಜೂರಾಗಿರುತ್ತದೆ. ಈ ಮೊತ್ತಕ್ಕೆ ಸರಿಯಾಗಿ ಕಿಮೀ 17.60 ರಿಂದ 21.90 ವರೆಗೆ ಡಾಂಬರೀಕರಣ

ಮಾಡಲು ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿ ಮಾಡಲಾಗಿದೆ. ಗುತ್ತಿಗೆದಾರರನ್ನು ನೇಮಿಸಲು ಪ್ರಕ್ರಿಯೆ ಪ್ರಗತಿಯಲ್ಲಿದೆ.

.....

115 (92): ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಅಳವಡಿಸಲು ರಾಜ್ಯ ಸರ್ಕಾರ ವೆಚ್ಚ ಮಾಡಿರುವ ಹಣ ಎಷ್ಟು; (ಕಳೆದ 3 ವರ್ಷಗಳ ವಿವರವನ್ನು ನೀಡುವುದು);

ಆ) ಈವರೆವಿಗೂ ನೀಡಿರುವ ವಿದ್ಯುತ್ ಸಂಪರ್ಕಗಳು ಎಷ್ಟು; (ಕಳೆದ 3 ವರ್ಷಗಳ ವಿವರವನ್ನು ನೀಡುವುದು);

ಇ) ಪ್ರತಿ ವರ್ಷ ಎಷ್ಟು ವಿದ್ಯುತ್ ಮೀಟರ್ ಅಳವಡಿಸಲು ಗುರಿ ಹೊಂದಲಾಗಿತ್ತು ಹಾಗೂ ಎಷ್ಟು ಅಳವಡಿಸಲಾಗಿದೆ;

ಈ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಈ ವಿದ್ಯುತ್ ಸಂಪರ್ಕಗಳಿಗೆ ವಿದ್ಯುತ್ ಮೀಟರ್ ಅಳವಡಿಸಲು ಅನಗತ್ಯ ವೆಚ್ಚ ಮಾಡಿರುವುದು ನಿಜವೇ;

ಉ) ಈ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಭಾಗ್ಯಜ್ಯೋಗಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳಿಗೆ ಮಾಪಕ ಅಳವಡಿಸಲು ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.

ಅವಧಿ	ಮಾಡಿದ ವೆಚ್ಚ (ಕೋಟಿ ರೂ.ಗಳಲ್ಲಿ)
2001–02	–
2002–03	20.867
2003–04	27.344
ಒಟ್ಟು	**48.211**

ಆ) ಕಳೆದ ಮೂರು ವರ್ಷಗಳಲ್ಲಿ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನೀಡಲಾದ ವಿವರಗಳು ಈ ಕೆಳಕಂಡಂತಿದೆ

ಅವಧಿ	ವಿದ್ಯುತ್ ಸಂಪರ್ಕ ನೀಡಲಾದ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳ ಸಂಖ್ಯೆ
2001–02	69.522
2002–03	1.12.039
2003–04	37.538
ಒಟ್ಟು	**2.19.099**